# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 251(300) |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-09-2021 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ. ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕೊಡಗು ಜಿಲ್ಲೆಯ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪಾದನೆಯಾಗುತ್ತಿರುವ ತ್ಯಾಜ್ಯದ ಪ್ರಮಾಣವೆಷ್ಟು;</td><td>ಕೊಡಗು ಜಿಲ್ಲೆಯ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿ ದಿನ 40 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ವಿವರಗಳು ಈ ಕೆಳಕಂಡಂತಿವೆ,
<table>
<tr><th>ಕ್ರ. ಸಂ.</th><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ಪ್ರತಿ ದಿನ ತ್ಯಾಜ್ಯ ಉತ್ಪಾದನೆ (ಟನ್)</th></tr>
<tr><td>1</td><td>ನಗರಸಭೆ ಮಡಿಕೇರಿ</td><td>22</td></tr>
<tr><td>2</td><td>ಪ.ಪಂ. ಕುಶಾಲನಗರ</td><td>7</td></tr>
<tr><td>3</td><td>ಪ.ಪಂ. ಸೋಮವಾರಪೇಟೆ</td><td>3</td></tr>
<tr><td>4</td><td>ಪ.ಪಂ. ವಿರಾಜಪೇಟೆ</td><td>8</td></tr>
<tr><td></td><td>ಒಟ್ಟು</td><td>40</td></tr>
</table></td></tr>
<tr><td>ಆ</td><td>ಸದರಿ ತ್ಯಾಜ್ಯವನ್ನು ಜಿಲ್ಲೆಯ ಪ್ರತಿಯೊಂದು ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ಸಂಸ್ಥೆಯು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿವೆ;</td><td>ಕೊಡಗು ಜಿಲ್ಲೆಯ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ತೆಗೆದುಕೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br>1. ನಗರಸಭೆ ಮಡಿಕೇರಿ ವ್ಯಾಪ್ತಿಯಲ್ಲಿ ಪ್ರತಿ ದಿನ 5 ಟ್ರಾಕ್ಟರ್ ಟ್ರೈಲರ್ ಹಾಗೂ 6 ಆಟೋ ಟಿಪ್ಪರ್‌ಗಳನ್ನು ಬಳಸಿಕೊಂಡು ಮನೆ ಮನೆಯಿಂದ ತ್ಯಾಜ್ಯವನ್ನು 3 ವಿಧದಲ್ಲಿ (ಹಸಿ ಕಸ, ಒಣ ಕಸ ಮತ್ತು ನೈರ್ಮಲ್ಯ ಕಸ) ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಣೆ ಮಾಡಲಾಗುತ್ತಿದೆ. ಮೂಲದಲ್ಲಿಯೇ ವಿಂಗಡಣೆ ಮಾಡಿದ ಕಸವನ್ನು ಕರ್ಣಂಗೇರಿ ಗ್ರಾಮದ ಸರ್ವೆ ನಂ 471/1ರ 6 ಎಕರೆ ಜಾಗದಲ್ಲಿ Windrow Composting / Pit method ಮೂಲಕ ಹಸಿಕಸದಿಂದ ಗೊಬ್ಬರ ತಯಾರಿಸಲಾಗುತ್ತಿದೆ. ಬೆಲೆಬಾಳುವ ಒಣ ಕಸವನ್ನು ಪೌರಕಾರ್ಮಿಕರು ಗುಜರಿ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಕಡಿಮೆ ಬೆಲೆಯ ಪ್ಲಾಸ್ಟಿಕ್ ತ್ಯಾಜ್ಯವನ್ನು ಜಾಗೃತ ಪ್ರೈವೆಟ್ ಟೆಕ್ ಲಿಮಿಟೆಡ್ ಅವರಿಗೆ ಮರು ಬಳಕೆಗಾಗಿ ನೀಡಲಾಗುತ್ತಿದೆ. ಸ್ಯಾನಿಟರಿ ಪ್ಯಾಡ್, ಡೈಯಾಪರ್ ಇತರೆ ತ್ಯಾಜ್ಯವನ್ನು Ramky Enviro Engineers ltd. Mangalore ಇವರಿಗೆ ವೈಜ್ಞಾನಿಕ ವಿಲೇವಾರಿಗಾಗಿ ಪೂರೈಸಲಾಗುತ್ತಿದೆ. ನಗರಸಭೆ ವತಿಯಿಂದ ಮಾಡ್ಯುಲರ್ ಬಲ್ಕ್ ಡೈಜೆಸ್ಟರ್ ಖರೀದಿಸಿದ್ದು, ಪ್ರತಿದಿನ 1 ಟನ್ ಹಸಿ ಕಸದಲ್ಲಿ ಗೊಬ್ಬರ ತಯಾರಿಸಲಾಗುತ್ತಿದೆ.<br>2. ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಆಟೋ ಟಿಪ್ಪರ್, 3 ಟ್ರಾಕ್ಟರ್, 1 ಕ್ಯಾಂಪ್ಯಾಕ್ಟರ್ ವಾಹನಗಳನ್ನು ಬಳಸಿಕೊಂಡು ಮೂಲದಲ್ಲಿಯೇ 2 ವಿಧದಲ್ಲಿ (ಹಸಿ ಹಾಗೂ ಒಣ ಕಸ) ಬೇರ್ಪಡಿಸಿ ಸಂಗ್ರಹಣೆ ಮಾಡಲಾಗುತ್ತಿದೆ. ಸಂಗ್ರಹಣೆ ಮಾಡಿದ ಕಸವನ್ನು ನಗರದ</td></tr>
</table>

| | | |
|---|---|---|
| | | ಹೊರವಲಯದಲ್ಲಿರುವ ಭುವನಗಿರಿಯ ಘನತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ ಮರು ವಿಂಗಡಿಸಿ ಹಸಿಕಸವನ್ನು ಗೊಬ್ಬರ ತಯಾರಿಕೆಗೆ ಹಾಗೂ ಒಣ ಕಸವನ್ನು ಸಿಮೆಂಟ್ ಕಾರ್ಖಾನೆ ಇತ್ಯಾದಿಗಳಿಗೆ ಕಚ್ಚಾ ವಸ್ತುವಾಗಿ ಪೂರೈಕೆ ಮಾಡಲಾಗುತ್ತದೆ.<br>3. **ಸೋಮವಾರಪೇಟೆ ಪಟ್ಟಣ ಪಂಚಾಯಿತಿ** ವ್ಯಾಪ್ತಿಯಲ್ಲಿ 3 ಟ್ರಾಕ್ಟರ್, 1 ಲಾರಿ ಹಾಗೂ ಒಟ್ಟು 13 ಜನ ಪೌರಕಾರ್ಮಿಕರನ್ನು ಬಳಸಿಕೊಂಡು ಮೂಲದಲ್ಲಿಯೇ 2 ವಿಧದಲ್ಲಿ (ಹಸಿ ಹಾಗೂ ಒಣ ಕಸ) ಬೇರ್ಪಡಿಸಿ ಸಂಗ್ರಹಣೆ ಮಾಡಲಾಗುತ್ತಿದೆ. ಸಂಗ್ರಹಣೆ ಮಾಡಿದ ಕಸವನ್ನು ಸೋಮವಾರಪೇಟೆ ಪಟ್ಟಣದ ಖಾಸಗಿ ಜಾಗದಲ್ಲಿ ಮರು ವಿಂಗಡಿಸಿ ಹಸಿಕಸವನ್ನು ಗೊಬ್ಬರ ತಯಾರಿಕೆಗೆ ಹಾಗೂ ಒಣ ಕಸವನ್ನು ಸಿಮೆಂಟ್ ಕಾರ್ಖಾನೆ ಇತ್ಯಾದಿಗಳಿಗೆ ಕಚ್ಚಾ ವಸ್ತುವಾಗಿ ಪೂರೈಕೆ ಮಾಡಲಾಗುತ್ತದೆ.<br>(ಸೋಮವಾರಪೇಟೆ ಪಟ್ಟಣದ ಹೊರವಲಯದಲ್ಲಿರುವ ಸಿದ್ಧಲಿಂಗಪುರದ 2.50 ಎಕರೆ ಜಾಗದಲ್ಲಿ ಘನತ್ಯಾಜ್ಯ ಘಟಕದ ಕಾಮಗಾರಿ ಪ್ರಗತಿಯಲ್ಲಿರುತ್ತದೆ)<br>4. **ವಿರಾಜಪೇಟೆ ಪಟ್ಟಣ ಪಂಚಾಯಿತಿ** ವ್ಯಾಪ್ತಿಯಲ್ಲಿ ಪ್ರತಿ ದಿನ 2 ಆಟೋ ಟಿಪ್ಪರ್, 3 ಟ್ರಾಕ್ಟರ್, 2 ಟಾಟಾ ಏಸ್ ವಾಹನಗಳಲ್ಲಿ ಒಟ್ಟು 28 ಪೌರ ಕಾರ್ಮಿಕರಿಂದ ದಿನನಿತ್ಯ 7 ರಿಂದ 8 ಟನ್ ಕಸವನ್ನು ಮೂಲ ಹಂತದಲ್ಲಿಯೇ ವಿಂಗಡಿಸಿ ಸಂಗ್ರಹಣೆ ಮಾಡಲಾಗುತ್ತಿದೆ. ಸಂಗ್ರಹಿಸಿದ ಕಸವನ್ನು ಅರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆರಂಬಾಡಿ ಗ್ರಾಮದ ಘನತ್ಯಾಜ್ಯ ಘಟಕದಲ್ಲಿ ಮತ್ತೊಮ್ಮೆ ಪ್ರತ್ಯೇಕಿಸಿ ಹಸಿಕಸವನ್ನು ಪಿಟ್ ವಿಧಾನದ ಮೂಲಕ ಗೊಬ್ಬರ ತಯಾರಿಕೆಗೆ ಹಾಗೂ ಒಣ ಕಸವನ್ನು ಸಿಮೆಂಟ್ ಕಾರ್ಖಾನೆ ಇತ್ಯಾದಿಗಳಿಗೆ ಕಚ್ಚಾ ವಸ್ತುವಾಗಿ ಪೂರೈಕೆ ಮಾಡಲಾಗುತ್ತದೆ. |
| ಇ | ಸದರಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಜಿಲ್ಲೆಯ ಪ್ರತಿಯೊಂದು ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ ಸಂಸ್ಥೆಯು ಕಳೆದ ವರ್ಷ ವಿನಿಯೋಗಿಸಿರುವ ಅನುದಾನವೆಷ್ಟು; ಸದರಿ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು | ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ವಿಲೇವಾರಿಗಾಗಿ ಕೈಗೊಂಡಿರುವ ಕಾಮಗಾರಿಗಳಿಗೆ ರೂ. 222.11 ಲಕ್ಷಗಳನ್ನು ವಿನಿಯೋಗಿಸಿದ್ದು, ಸ್ಥಳೀಯ ಸಂಸ್ಥೆವಾರು ವಿವರಗಳನ್ನು **ಅನುಬಂಧ**-1 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ನಅಇ 151 ಸಿಎಸ್‌ಎಸ್ 2021

[ಎನ್. ನಾಗರಾಜ್ (ಎಂ.ಟಿ.ಬಿ.)]
ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.

# ಅನುಬಂಧ-1

## ಘನತ್ಯಾಜ್ಯ ನಿರ್ವಹಣೆಗಾಗಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಂಡಿದ್ದು, ಅನುದಾನದ ವೆಚ್ಚ ಮಾಡಲಾಗಿರುತ್ತದೆ.

| ಕ್ರಸಂ | ನಗರಸ್ಥಳೀಯ ಸಂಸ್ಥೆಯ ಹೆಸರು | ಕೈಗೊಂಡ ಕಾಮಗಾರಿಗಳ ವಿವರ | ವೆಚ್ಚ ಮಾಡಿರುವ ವಿವರ (ರೂ ಲಕ್ಷಗಳಲ್ಲಿ) | ವಾಹನ ಯಂತ್ರೋಪಕರಣಗಳ ಖರೀದಿ | ವೆಚ್ಚ ಮಾಡಿರುವ ವಿವರ (ರೂ ಲಕ್ಷಗಳಲ್ಲಿ) |
|---|---|---|---|---|---|
| 1 | ನಗರಸಭೆ ಮಡಿಕೇರಿ | 2019-20ನೇ ಸಾಲಿನ 14ನೇ ಹಣಕಾಸು ಯೋಜನೆಯಡಿಯಲ್ಲಿ ನೆಲಭರ್ತಿ ಜಾಗದಲ್ಲಿ ಕಾಂಪೌಂಡ್ ಅಭಿವೃದ್ಧಿ ಕಾಮಗಾರಿ | 9.00 | 2017-18ನೇ ಸಾಲಿನ 14ನೇ ಹಣಕಸು ಯೋಜನೆಯಡಿಯಲ್ಲಿ 2 ಟ್ರಾಕ್ಟರ್ ಟ್ರೈಲರ್ ಖರೀದಿ | 14.06 |
| | | 2019-20ನೇ ಸಾಲಿನ 14ನೇ ಹಣಕಾಸು ಯೋಜನೆಯಡಿಯಲ್ಲಿ 1 ನೆಲಭರ್ತಿ ಜಾಗದಲ್ಲಿ ಸ್ಕ್ರೀನಿಂಗ್ ಶೇಡ್ ಅಭಿವೃದ್ಧಿ ಕಾಮಗಾರಿ | 1.08 | 2017-18ನೇ ಸಾಲಿನ 14ನೇ ಹಣಕಾಸು ಯೋಜನಯಡಿಯಲ್ಲಿ 1 ಬೇಲಿಂಗ್ ಮಿಷನ್ ಖರೀದಿ | 3.05 |
| | | | | 2019-20ನೇ ಸಾಲಿನ 14ನೇ ಹಣಕಾಸು ಯೋಜನೆಯಡಿಯಲ್ಲಿ 1 ಜೆ.ಸಿ.ಬಿ ಖರಿದಿ | 31.00 |
| | | | | 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಬಲ್ಕ್ ಡೈಜೆಸ್ಟರ್ ಖರೀದಿ | 30.50 |
| | | | | 2020-21ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಡಿ.ಡಬ್ಲ್ಯೂಸಿಸಿ ಕಾಮಗಾರಿ | 20.00 |
| | | **ಒಟ್ಟು** | **10.08** | **ಒಟ್ಟು** | **98.61** |
| 2 | ಪಟ್ಟಣ ಪಂಚಾಯಿತಿ ಕುಶಾಲನಗರ | ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಘನತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಸೆಪ್ಟಿಕ್ ಟ್ಯಾಂಕ್ ನಿರ್ಮಾಣ | 1.60 | ಆಟೋ ಟಿಪ್ಪರ್- 5 | 26.00 |
| | | ಕುಶಾಲನಗರ ಪಟ್ಟಣ ಪಂಚಾಯಿತಿ ಘನತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಶೌಚಾಲಯ ನಿರ್ಮಾಣ | 2.70 | ಕಾಂಪ್ಯಾಕ್ಟರ್ -1 | 28.65 |
| | | ಕುಶಾಲನಗರದಲ್ಲಿ ಪಟ್ಟಣ ಪಂಚಾಯಿತಿ ಘನತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಕಾಂಪೌಂಡ್ ವಾಲ್ ನಿರ್ಮಾಣ | 5.08 | ಬ್ಯಾಕ್ ಹೋ ಲೋಡರ್-1 | - |
| 3 | ಪಟ್ಟಣ ಪಂಚಾಯಿತಿ ಸೋಮವಾರಪೇಟೆ | ಸೋಮವಾರಪೇಟೆ ಪಟ್ಟಣ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಒಣ ಕಸವನ್ನು ಸಂಗ್ರಹಿಸಲು ಕೋಣೆ ನಿರ್ಮಾಣದ ಕಾಮಗಾರಿ | 0.00 | ಘನತ್ಯಾಜ್ಯ ನಿರ್ವಹಣೆ 2 ಕ್ಯಾಬಿಕ್ ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ 4 ಚಕ್ರದ 1 ಸಂಖ್ಯೆಯ ಆಟೋ ಟಿಪ್ಪರ್ ವಾಹನವನ್ನು ಸರಬರಾಜು ಮಾಡುವುದು | 0.00 |

| | | | | | |
|---|---|---|---|---|---|
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ | 8.19 | ಘನತ್ಯಾಜ್ಯ ನಿರ್ವಹಣೆಗೆ 76 ಹೆಚ್.ಪಿ ಅಥವಾ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ 3 ಡಿಎಕ್ಸ್ ಬ್ಯಾಕ್ ಹೋ ಲೋಡರ್ ವಾಹನವನ್ನು ಖರೀದಿಸುವುದು | 0.00 |
| | | ಒಟ್ಟು | 17.57 | ಒಟ್ಟು | 54.65 |
| 3 | ಪಟ್ಟಣ ಪಂಚಾಯಿತಿ ಸೋಮವಾರಪೇಟೆ | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ | 0.00 | ಘನತ್ಯಾಜ್ಯ ನಿರ್ವಹಣೆಗೆ 3 ಟನ್/ ಪ್ರತಿ ದಿನ ಸಾಮರ್ಥ್ಯದ ಬೇಲಿಂಗ್ ಮೆಷಿನ್ ಖರೀದಿಸುವುದು | 0.00 |
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಆಜಾಜತಿ ಛಣಡುಚೆಟಿ ಕುಣ ನಿರ್ಮಾಣ ಕಾಮಗಾರಿ | 0.00 | | |
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಮಳೆ ನೀರು ಕೊಯ್ಲು ನಿರ್ಮಾಣ ಕಾಮಗಾರಿ | 0.00 | | |
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ | 0.00 | | |
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಲ್ವರ್ಟ್ ನಿರ್ಮಾಣ ಕಾಮಗಾರಿ | 0.00 | | |
| | | ಸೋಮವಾರಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಗುಂಡಿ ತೆಗೆಯುವ ಕಾಮಗಾರಿ | 0.00 | | |
| | | ಒಟ್ಟು | 0 | ಒಟ್ಟು | 0 |
| 4 | ಪಟ್ಟಣ ಪಂಚಾಯಿತಿ ವಿರಾಜಪೇಟೆ | ವಿರಾಜಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ | 11.09 | - | - |
| | | ವಿರಾಜಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ | 9.31 | - | - |
| | | ವಿರಾಜಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ | 7.87 | - | - |
| | | ವಿರಾಜಪೇಟೆ ಪಟ್ಟಣದ ಘಮತ್ಯಾಜ್ಯ ವಿಲೇವಾರಿ ಘಟಕದಲ್ಲಿ ಕಲ್ವರ್ಟ್ ನಿರ್ಮಾ ಕಾಮಗಾರಿ | 1.35 | - | - |
| | | ವಿರಾಜಪೇಟೆ ಪಟ್ಟಣದ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಒಣ ಕಸವನ್ನು ಸಂಗ್ರಹಿಸಲು ಕೋಣೆ ನಿರ್ಮಾಣದ ಕಾಮಗಾರಿ | 11.58 | - | - |
| | | ಒಟ್ಟು | 41.2 | ಒಟ್ಟು | 0 |
| | | ಒಟ್ಟು | 68.85 | ಒಟ್ಟು | 153.26 |